KA / BG-GPO/2515/WPP-47/2009-2011



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಫೆಬ್ರವರಿ ೧೨, ೨೦೦೯ (ಮಾಘ ೨೩, ಶಕ ವರ್ಷ ೧೯೩೦)	ಸಂಚಿಕೆ ೭

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

FINANCE SECRETARIAT

NOTIFICATION

No. FD 54 KGID 2008, Bangalore, Dated: 23rd December 2008

Whereas the draft of the rules to amend the Karnataka Government servants (Compulsory Life Insurance) Rules was published as required by Sub-section (1) of Section 3 read with section of the Karnataka State Civil Services Act, 1978 (Act No. 14 of 1990) in Notification No. FD 54 KID 2008, dated:9.9.2008 in Part-IV-A of the Karnataka Gazette dated:16th October, 2008 inviting objections and suggestions from persons likely to be affected thereby within 15 days from the date of the publication of the draft in the official Gazette.

Whereas the said Gazette was made available to the public on 16th October, 2008,

And where as no objections and suggestions have been received by the State Government,

Now therefore, in exercise of the powers conferred by sub-section (1) of Section 3 read with section 8 of the Karnataka civil services Act, 1978 (Karnataka Act No. 14 of 1990) the Government of Karnataka hereby makes the following rules namely:

RULES

1. Title and Commencement: (1) These rules may be called the Karnataka Government servants (Compulsory Life Insurance) (Amendment) Rules, 2008.

(2) They shall come into force from the date of their publication in the Official Gazette.

2. Amendment of rule 27-A: In the Karnataka Government Servant's (compulsory life insurance) Rules, 1958 in rule 27A, in sub-rule (1), for the letters, figures, brackets and words "Rs. 375 (Three hundred and Seventy five)" the words "Rs 510/- (Rupees five hundred and ten") shall be substituted.

By order and in the name of the Governor of Karnataka,

N. SRINIVASA MURTHY

Under Secretary to Government,

Finance Department.(Admn and Advances)

ಆರ್ಥಿಕ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಆಇ 54 ಕವಿಇ 2008, ಬೆಂಗಳೂರು, ದಿನಾಂಕ: 23ನೇ ಡಿಸೆಂಬರ್ 2008

ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮೆ) ನಿಯಮಗಳಿಗೆ ಇನ್ನಷ್ಟು ತಿದ್ದುಪಡಿ ಮಾಡುವ ನಿಯಮಗಳ ಕರಡನ್ನು ಅದರಿಂದ ತೊಂದರೆಗಳೊಳಗಾಗಬಹುದಾದ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಅಧಿಕೃತ ರಾಜ್ಯ ಪತ್ರದಲ್ಲಿ ಆ ಕರಡು ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳು/ಸಲಹೆಗಳನ್ನು ಆಹ್ವಾನಿಸಿ ದಿನಾಂಕ:16.10.2008 ರಂದು ಕರ್ನಾಟಕ ರಾಜ್ಯ ಪತ್ರದ ಭಾಗ– IV-A ರಲ್ಲಿ ಅಧಿಸೂಚನೆ ಸಂಖ್ಯೆ:ಆಇ 54 ಕವಿಇ 2008, ದಿನಾಂಕ:9.9.2008ರಲ್ಲಿ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1990 ಸಂಖ್ಯೆ:14)ರ ಪ್ರಕರಣ 8ರೊಂದಿಗೆ ಓದಿಕೊಳ್ಳಲಾದ 3ನೇ ಪ್ರಕರಣವನ್ನು (1)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ,

ಸದರಿ ರಾಜ್ಯ ಪತ್ರವನ್ನು 16ನೇ ಅಕ್ಟೋಬರ್ 2008ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿರುವುದರಿಂದ,

ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆಗಳು:ಸಲಹೆಗಳು ಬಂದಿರುವುದಿಲ್ಲವಾದ್ದರಿಂದ,

ಈಗ 1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ (1990ರ ಕರ್ನಾಟಕ ಅಧಿನಿಯಮ ಸಂಖ್ಯೆ:14) ಪ್ರಕರಣ 8ರೊಂದಿಗೆ ಓದಿಕೊಳ್ಳಲಾದ 3ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಗಳನ್ನು ಈ ಮೂಲಕ ಮಾಡುತ್ತದೆ.

ನಿಯಮಗಳು:

1. ಹೆಸರು ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವವಿಮೆ) (ತಿದ್ದುಪಡಿ) ನಿಯಮಗಳು, 2008 ಎಂದು ಕರೆಯತಕ್ಕದ್ದು.

(2) ಇವುಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಯಲ್ಲಿ ಬರತಕ್ಕದ್ದು.

2. ನಿಯಮ 27–ಅ ಕ್ಕೆ ತಿದ್ದುಪಡಿ: ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವವಿಮೆ) ನಿಯಮಗಳು, 1958ರ ನಿಯಮ 27–ಅ ದ ಉಪನಿಯಮ (1)ರಲ್ಲಿ ನಮೂದಿಸಲಾದ "ರೂ 375 (ಮುನ್ನೂರ ಎಪ್ಪೆತ್ತೈದು ರೂಪಾಯಿಗಳು) ಎಂಬ ಅಕ್ಷರಗಳು ಅಂಕಿಗಳು ಹಾಗೂ ಬ್ರಾಕೆಟ್ ಹಾಗೂ ಪದಗಳ ಬದಲಾಗಿ "ರೂ 510/– (ಐದು ನೂರ ಹತ್ತು ರೂಪಾಯಿಗಳು)" ಎಂದು ಪ್ರತಿಷ್ಠಾಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಶ್ರೀನಿವಾಸ ಮೂರ್ತಿ

ಪಿ.ಆರ್. 82 ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ, (ಆಡಳಿತ ಮತ್ತು ಮುಂಗಡಗಳು)

PERSONNEL AND ADMINISTRATIVE REFORMS SECRETARIAT

NOTIFICATION No. DPAR 15 SMR 2008, Bangalore, Dated: 12th January , 2009

In exercise of the powers conferred by clause (ff) of rule 3 of the Karnataka Government Servants' (Medical Attendance) Rules 1963, the Government of Karnataka hereby adds the following item after Item 236 of Schedule I to the said rules, namely:

(237) Vivekananda Memorial Hospital, Hanchipura Road, Saragur H.D. Kote Taluk, Mysore District-571 121.

By Order and in the name of the Governor of Karnataka,

P. MARKANDEYA

Under Secretary to Government,

P.R. 87 Department of Personnel and Administrative Reforms

(Services Rules-2)

KARNATAKA GOVERNOR'S SECRETARIAT

NOTIFICATION

No. GS 26 BUM 2008, Bangalore, Dated: 2nd February , 2009

WHEREAS, Prof. H.A. Ranganath, was appointed as Vice Chancellor, Bangalore University, Bangalore vide Notification No. GS 13 BUM 2005 dated 23rd May 2006 for a period of four years with effect from 29th May 2006. His tenure in the normal course would have expired on 28th May 2010

WHEREAS, Prof. H.A. Ranganath vide his letter dated11th August, 2008 tendered his resignation for the post of Vice-Chancellor, Bangalore University, Bangalore, on his selection as Director, National Assessment and Accreditation Council, Bangalore. The resignation of Prof. H.A. Ranganath as Vice Chancellor, was accepted and he was relieved from Office of the Vice Chancellor with effect from 18th August, 2008.

WHEREAS, the vacancy in the Office of the Vice Chancellor remained unfilled, as the Search Committee was not constituted under Section 14 (2) of the Karnataka State Universities Act, 2000. Therefore, Dr. H.T. Rathod, senior most Dean,, Faculty of Science, Bangalore University, Bangalore was appointed as acting Vice Chancellor of Bangalore University under Section 16(2) of Karnataka State Universities Act, 2000, with effect from. 18th August, 2008

WHEREAS, the tenure of Deanship of Dr. H.T. Rathod, expired on 30th November, 2008, and he ceased to be the acting Vice Chancellor, in accordance with Section 16 (2) of the Karnataka State Universities Act, 2000. Therefore, Dr. Pushpa D. Bhat, Senior-most Dean, Faculty of Commerce, Bangalore University, Bangalore, was appointed as acting Vice Chancellor of Bangalore University under Section 16(2) of Karnataka State Universities Act, 2000, with effect from 1st December, 2008.

WHEREAS, a Search Committee constituted by the State Government under sub-section 2 of Section 14 of the Karnataka State Universities Act 2000, has submitted a panel of names to the State Government for appointment of Vice Chancellor of the Bangalore University.

WHEREAS, from the panel of names, the name of Dr. N. Prabhu Dev has been recommended by the State Government.

NOW, THEREFORE, IN EXERCISE OF THE POWERS CONFERRED ON ME, BY SECTION 14(4) OF THE KARNATAKA STATE UNIVERSITIES ACT, 2000, KEEPING IN VIEW MERIT, EQUITY AND SOCIAL JUSTICE AND WITH THE CONCURRENCE OF THE STATE GOVERNMENT, I, RAMESHWAR THAKUR, GOVERNOR OF KARNATAKA AND CHANCELLOR OF THE UNIVERSITIES IN KARNATAKA, hereby appoint Shri N. Prabhu Dev., as the Vice Chancellor of Bangalore University, Bangalore, for a period of four years, with effect from the date of assumption of office or till he attains the age of 65 years, whichever is earlier.

RAMESHWAR THAKUR

Governor of Karnataka and Chancellor

P.R. 88

SHARADA SUBRAMANIAM

Secretary to Governor.

PERSONNEL AND ADMINISTRATIVE REFORMS SECRETARIAT

NOTIFICATION

No. DPAR 49 SRR 2008, Bangalore, Dated: 30th January , 2009

The draft of the following rules further to amend the Karnataka Recruitment of Gazetted Probationers (Appointment by Competitive Examinations) Rules, 1997, which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published

as required by clause (a) of sub-section (2) of section 3 of the said Act, for the information of persons likely to be affected thereby and notice is hereby given that the said draft will be taken into consideration after fiftten days from the date of its publication in the Official Gazette.

Any objection or suggestion, which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Secretary to Government, Department of Personnel and Administrative Reforms, Vidhana Soudha, Bangalore-560 001.

DRAFT RULES

1. Title and commencement: (1) These rules may be called the Karnataka Recruitment of Gazetted Probationers (Appointment by Competitive Examinations) (4th Amendment) Rules, 2008.

(2) They shall come into force from the date of their publication in the Official Gazette.

2. Amendment of Rule 5: In rule 5 of the Karnataka Recruitment of Gazetted Probationers (Appointment by Competitive Examinations) Rules, 1997 (hereinafter referred to as said rules), for the words and figure "age of 33", the words and figures, "age of 35" shall be substituted.

3. Savings: Notwithstanding anything contained in these rules, the recruitment to any service or post which is under process and pending on the date of commencement of these rules shall be finalized in accordance with the said rules which were in force immediately prior to the commencement of these rules.

By Order and in the name of the Governor of Karnataka,

DEVARAJU

Under Secretary to Government,

Department of Personnel and Administrative Reforms

(Service Rules-I)

P.R. 89

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 190 ಎಲ್ಎಂಡಬ್ಲ್ಯೂ 2007, ಬೆಂಗಳೂರು, ದಿನಾಂಕ: 19ನೇ ಮಾರ್ಚ್, 2008.

ಕರ್ನಾಟಕ ರಾಜ್ಯಾದ್ಯಂತ " ಪ್ರೊಕ್ಯೂರ್ಮೆಂಟ್, ಪ್ರೊಸೆಸಿಂಗ್ ಅಂಡ್ ಡಿಸ್ಟ್ರಿಬ್ಯೂಷನ್ ಆಫ್ ಮಿಲ್ಕ್" ಉದ್ದಿಮೆಗಳಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕೆಳಕಂಡ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿರುವಂತೆ ಕನಿಷ್ಟ ವೇತನವನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿದೆ. ಕನಿಷ್ಟ ವೇತನ ಕಾಯ್ದೆ 1948ರ ಕೇಂದ್ರಾಧಿನಿಯಮ ಸಂಖ್ಯೆ: (XI) 3ನೇ ಪ್ರಕರಣದ 1ನೇ ಉಪ ಪ್ರಕರಣದ (ಬಿ) ಖಂಡದ ಮತ್ತು 5ನೇ ಪ್ರಕರಣದ (1) ಉಪ ಪ್ರಕರಣದ (ಬಿ) ಖಂಡದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಈ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 2 ತಿಂಗಳ ಅವಧಿಯೊಳಗೆ ಭಾದಿತರಾಗುವ ವ್ಯಕ್ತಿಗಳಿಂದ ಸಲಹೆ: ಸೂಚನೆಗಳನ್ನು ಸ್ವೀಕರಿಸಲಾಗುವುದು. ತದನಂತರ ಬಂದ ಸಲಹೆ/ ಸೂಚನೆಗಳನ್ನು ಪರಿಗಣಿಸಲಾಗುವುದಿಲ್ಲ. ಸಲಹೆ : ಆಕ್ಷೇಪಣೆಗಳೇನಾದರು ಇದ್ದಲ್ಲಿ ಅದನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಇಲ್ಲವೇ ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 29 ಇಲ್ಲಿಗೆ ಸಲ್ಲಿಸಬಹುದಾಗಿರುತ್ತದೆ.

ಕನಿಷ್ಟ ವೇತನ ಕಾಯ್ದೆ 1948ರ ಅಧಿನಿಯಮ 3ನೇ ಪ್ರಕರಣದ 1ನೇ ಉಪ ಪ್ರಕರಣದ (ಬಿ) ಖಂಡದ ಮತ್ತು 5ನೇ ಪ್ರಕರಣದ (1)ನೇ ಉಪ ಪ್ರಕರಣದ (ಬಿ) ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿರುವಂತೆ, ಕರ್ನಾಟಕ ರಾಜ್ಯಾದ್ಯಾಂತ ಯಾವುದೇ "**ಪ್ರೊಕ್ಯೂರ್ಮೆಂಟ್, ಪ್ರೋಸೆಸಿಂಗ್ ಅಂಡ್ ಡಿಸ್ಟ್ರಿಬ್ಯೂಷನ್ ಆಫ್ ಮಿಲ್ಕ್** " ಉದ್ದಿಮೆಯ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕ ವರ್ಗದವರಿಗೆ ವೇತನವನ್ನು ಪರಿಷ್ಕರಿಸಲು ಪ್ರಸ್ತಾಪಿಸಿದೆ.

ಅನುಸೂಚಿ

ಕ್ರ. ಸಂ	**ಕೆಲಸದ ವರ್ಗಗಳು**	ಕನಿಷ್ಟ ವೇತನ ಪ್ರತಿ ತಿಂಗಳಿಗೆ [ರೂ.ಗಳಲ್ಲಿ]	
		ವಲಯ–1	ವಲಯ–2
1	2	3	4
	1. ಅತಿ ಕುಶಲ ಕಾರ್ಮಿಕರು		
1.	*ಮ್ಯಾನೇಜರ್*	3074	3008
2.	*ಟೆಕ್ನಿಕಲ್ ಆಫೀಸರ್*		
3.	*ವೆಟನರಿ ಆಫೀಸರ್*		
4.	*ಸೂಪರ್ ವೈಸರ್*		
	2. ಕುಶಲ ಕಾರ್ಮಿಕರು		
1.	ಮೆಕ್ಯಾನಿಕ್	2909	2842
2.	ಟೆಕ್ನೀಷಿಯನ್		
3.	ಮಿಷನ್ ಆಪರೇಟರ್		
4.	ಆಪರೇಟರ್		
5.	ಇತರ ಕುಶಲ ಕೆಲಸಕ್ಕೆ		
	3. ಅರೆ ಕುಶಲ ಕಾರ್ಮಿಕರು		
1.	ಸಹಾಯಕ ಮೆಕ್ಯಾನಿಕ್	2743	2677
2.	ಸೇಲ್ಸ್‌ಮನ್		
3.	ಇತರ ಅರೆ ಕುಶಲ ಕಾರ್ಮಿಕರು		
4.	ಡ್ರೈವರ್		
	4. ಕುಶಲರಲ್ಲದ ಕಾರ್ಮಿಕರು		
1.	ಸಹಾಯಕರು	2455	2423
2.	ಸರಬರಾಜುದಾರರು		
3.	ಅಟೆಂಡರ್		
4.	ಹೆಲ್ಪರ್		
5.	ವಾಚ್‌ಮನ್		
6.	ಕ್ಲೀನರ್		
7.	ಮಜ್ದೂರ್		
8.	ಸ್ವೀಪರ್		
9.	ಮೇಲೆ ಕಾಣಿಸದೇ ಇರುವ ಕುಶಲರಲ್ಲದ ಕಾರ್ಮಿಕರು		
	5. ಕಛೇರಿ ಸಿಬ್ಬಂದಿ		
1.	ಅಕೌಂಟೆಂಟ್	2777	2743
2.	ಗುಮಾಸ್ತ		
3.	ಬೆರಳಚ್ಚುಗಾರರು	2743	2711
4.	ಸೇಲ್ಸ್‌ಮನ್	2497	2488
5.	***ಆಫೀಸ್ ಬಾಯ್***		

ತುಟ್ಟಿಭತ್ಯೆ:

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 2822 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 2822 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 3 ಪೈಸೆಯಂತೆ ತುಟ್ಟಿಭತ್ಯೆ ನೀಡತಕ್ಕದ್ದು.

ಜೀವನ ನಿರ್ವಹಣಾ ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2006 ರಿಂದ ಡಿಸೆಂಬರ್ 2006)ರ ಸರಾಸರಿ ಆಧಾರದ ಮೇಲೆ 2007 ಎಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ವೇತನದ ಮಾಸಿಕ ದರಗಳನ್ನು 26 ದಿನಗಳಿಂದ ವಿಭಾಗಿಸಿ, ನಾಲ್ಕು ರಜಾ ದಿನಗಳಿಗಾಗಿ ವೇತನವನ್ನು ನೀಡುವುದು ಸೇರಿದಂತೆ ಲೆಕ್ಕ ಹಾಕಲಾಗುವುದು.
2. ಕೆಲಸದ ಸ್ವರೂಪವು ಒಂದೇ ರೀತಿಯದಾಗಿರುವ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರಿಗೆ ಪುರುಷ ಕಾರ್ಮಿಕರಿಗೆ ನೀಡುವ ವೇತನದ ದರಗಳನ್ನೇ ಸಂದಾಯ ಮಾಡತಕ್ಕದ್ದು.
3. ವೇತನ ಪಾವತಿಯಲ್ಲಿರುವ ದರವು ಹೆಚ್ಚಾಗಿದ್ದಲ್ಲಿ, ಆ ಹೆಚ್ಚಾಗಿರುವ ದರಗಳ ವೇತನ ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.
4. ಅಧಿಸೂಚನೆಯಲ್ಲಿ ಸೂಚಿಸದೇ ಇರುವ ವರ್ಗದವರಿಗೆ ಅದೇ ಸ್ವರೂಪದ ಉದ್ಯೋಗದ ಕಾರ್ಮಿಕರಿಗೆ ಕೊಡುವ ವೇತನವನ್ನು ಸಂದಾಯ ಮಾಡತಕ್ಕದ್ದು.
5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ವೇತನದ ಕೂಲಿಯ ಪ್ರಮಾಣವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
6. ವಾರದ ಅಥವಾ ಹಬ್ಬದ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ 1948 ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಕೊಡತಕ್ಕದ್ದು.
7. ಸಾಮಾನ್ಯ ಕೆಲಸದ ಅವಧಿಗಿಂತ ಮೀರಿದ ಕೆಲಸಕ್ಕೆ ಸಾಮಾನ್ಯ ದರಗಳ ಎರಡು ಪಟ್ಟು ವೇತನವನ್ನು ಕೊಡುವುದು.
8. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.
9. (ಅ) ಕಿಶೋರಾವಸ್ಥೆ ಕಾರ್ಮಿಕರಿಗೆ ಅವರು ಸೇರಿದ ವರ್ಗದ 80 ಪ್ರತಿಶತ ವೇತನವನ್ನು ಕೊಡತಕ್ಕದ್ದು.
   (ಆ) ಕಿಶೋರಾವಸ್ಥೆ ಎಂದರೆ 15 ವರ್ಷ ಮೀರಿದ, ಆದರೆ 18 ವರ್ಷದೊಳಗಿರುವ ವ್ಯಕ್ತಿ.
10. ಅಪ್ರೆಂಟೀಸ್‌ಗಳಿಗೆ ಅವರ ವರ್ಗದ ವೇತನದ ಪ್ರತಿಶತ 75 ರಷ್ಟು ವೇತನವನ್ನು ಕೊಡತಕ್ಕದ್ದು.
11. **ಅತಿ ಕುಶಲ** : ಹೆಚ್ಚಿನ ನೈಪುಣ್ಯತೆಯ ಕೆಲಸ ಮಾಡುವ ಸಾಮರ್ಥ್ಯವುಳ್ಳ ನಕ್ಷೆಗಳ ಮೇಲೆ ಕೆಲಸ ಮಾಡಬಲ್ಲ ಮತ್ತು ಕುಶಲ ಕೆಲಸಗಾರರ ಗುಂಪಿಗೆ ಹಾಗೂ ಇತರೆ ಕಾರ್ಮಿಕರಿಗೆ ನಿರ್ದೇಶನ ಮಾಡುವ ಸಾಮರ್ಥ್ಯವುಳ್ಳ ಇವರು ದೈನಂದಿನ ಅಥವಾ ತನ್ನ ಕೈಕೆಳಗಿನ ಕೆಲಸ ಸಂಘಟಿಸುವ ಸಾಮರ್ಥ್ಯ ಪಡೆದಿರಬೇಕು.
12. **ಕುಶಲ** : ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ, ಅವಶ್ಯವಿದ್ದರೆ ಸರಳವಾದ ನಕ್ಷೆಗಳನ್ನು ಓದಿ ಮತ್ತು ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.
13. **ಅರೆ ಕುಶಲ** : ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರ ಉಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.
14. **ಕುಶಲರಲ್ಲದವರು** : ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದ, ಆದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನುಗಳ ಜ್ಞಾನವಿರುವ ಕೆಲಸವನ್ನು ಮಾಡುವವರು.

15. ಯಾವುದೇ ಯಂತ್ರಗಳನ್ನು ನಡೆಸಲು ನೇಮಿಸಿರುವ ಕಾರ್ಮಿಕರನ್ನು ಕುಶಲರಲ್ಲದ ವರ್ಗಕ್ಕೆ ಸೇರಿಸಬಾರದು. ಕಾವಲುಗಾರ, ಸಿಪಾಯಿ, ಚೌಕೀದಾರ, ಕಸ ಗುಡಿಸುವವರು, ಜಾಡಮಾಲಿ ಹಾಗೂ ಅದೇ ತರಹದ ಕೆಲಸ ಮಾಡುವ ಕಾರ್ಮಿಕರನ್ನು ಕುಶಲರಲ್ಲದ ವರ್ಗಕ್ಕೆ ಸೇರಿಸುವುದು.

ವಲಯ–1 : ಬೆಂಗಳೂರು ಆಗ್ಲೋಮರೇಷನ್ ಪ್ರದೇಶ ಮತ್ತು ಜಿಲ್ಲಾ ಕೇಂದ್ರ ಪ್ರದೇಶಗಳು ಮತ್ತು ಅದಕ್ಕೆ ಗೊತ್ತುಪಡಿಸಿದ ಆಗ್ಲೋಮರೇಷನ್ ಪ್ರದೇಶಗಳು.

ವಲಯ–2 : ವಲಯ–1 ರಲ್ಲಿ ನಮೂದಿಸದೇ ಇರುವ ರಾಜ್ಯದ ಇತರೇ ಪ್ರದೇಶಗಳು.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಶಿವಲಿಂಗಯ್ಯ

ಪಿ.ಆರ್. 93

ಸರ್ಕಾರದ ಅಧೀನ ಕಾರ್ಯದರ್ಶಿ
ಹಾಗೂ ಪೀಠಾಧಿಕಾರಿ–2
ಕಾರ್ಮಿಕ ಇಲಾಖೆ

ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಅಪಜೀ 58 ಎಫ್‌ಎಎಫ್ 2006, ಬೆಂಗಳೂರು, ದಿನಾಂಕ: 02ನೇ ಡಿಸೆಂಬರ್ 2008.

ಕರ್ನಾಟಕ ಅರಣ್ಯ ಕಾಯ್ದೆ 1963ನೇ (1964ನೇ ಇಸವಿಯ ಕಾಯ್ದೆ 5)ಕಲಂ–4ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು ಹಂಗಳ ಹೋಬಳಿ, ಬಾಚಳ್ಳಿ ಗ್ರಾಮದ ಸರ್ಕಾರಿ ಜಮೀನುಗಳನ್ನು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ, "ಮೀಸಲು ಅರಣ್ಯ" ವೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

1)	ಹೋಬಳಿ ಮತ್ತು ಗ್ರಾಮದ ಹೆಸರು	:	ಹಂಗಳ ಹೋಬಳಿ ಬಾಚಳ್ಳಿ ಗ್ರಾಮ
2)	ಕ್ಷೇತ್ರದ ಸರ್ವೆ ನಂಬರು	:	ವಿಸ್ತೀರ್ಣ (ಎಕರೆ ಮತ್ತು ಗುಂಟೆ)
	242		***250 ಎಕರೆ 32 ಗುಂಟೆ***
	284		***197 ಎಕರೆ 27 ಗುಂಟೆ***
			ಒಟ್ಟು : 448 ಎಕರೆ 19 ಗುಂಟೆ
3)	***ಕ್ಷೇತ್ರದ ಹೆಸರು***	:	ಬಾಚಳ್ಳಿ, ಸರ್ವೆ ನಂ.242 ಮತ್ತು 284 'ಸಿ' ಮತ್ತು 'ಡಿ' ನೆಡುತೋಪು.

ಮೇಲ್ಕಂಡ ಕಾಯ್ದೆಯ ಕಲಂ–4(1)(ಸಿ) ಪ್ರಕಾರ ಕರ್ನಾಟಕ ಸರ್ಕಾರವು ಕೊಳ್ಳೇಗಾಲ ಕಂದಾಯ ಉಪ ವಿಭಾಗಾಧಿಕಾರಿ, ಕೊಳ್ಳೇಗಾಲ ಇವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಿದೆ. ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಮೇಲೆ ನಮೂದಿಸಿರುವ ಪ್ರದೇಶದ ಮೇಲೆ ಯಾವುದೇ ವ್ಯಕ್ತಿಗೆ ಇರಬಹುದಾಗಿರುವ ಹಕ್ಕು ಬಾದ್ಯತೆಗಳನ್ನು ಇತ್ಯಾರ್ಥಗೊಳಿಸಿ, ನಿರ್ಧರಿಸಿ, ವಿಚಾರಣೆ ಮಾಡಿ ತೀರ್ಮಾನಿಸುವುದು.

ಮೇಲ್ಕಂಡ ಕಾಯ್ದೆ ಕಲಂ–4(2) ರ ಪ್ರಕಾರ ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಕೊಳ್ಳೆಗಾಲ ವಿಭಾಗ, ಕೊಳ್ಳೇಗಾಲ ಇವರು ಈ ವಿಚಾರಣೆಯಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ ಸಹಕರಿಸಲು ಹಾಗೂ ಅರಣ್ಯ ಇಲಾಖೆಯ ಪರವಾಗಿ ಪ್ರತಿನಿಧಿಸಲು ನೇಮಿಸಿದೆ.

ಮೇಲ್ಕಂಡ ಅಧಿನಿಯಮ 11, 12 ಮತ್ತು 14ನೇ ಪ್ರಕರಣಗಳ ಪ್ರಕಾರ ಅರಣ್ಯ ವ್ಯವಸ್ಥಾಪಾಧಿಕಾರಿಗಳು ಯಾವುದೇ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗಾಗಿ ಬಾಧಿತವಾದ ವ್ಯಕ್ತಿಗಳು ಸಲ್ಲಿಸಿದ ಮೇಲ್ಮನವಿಗಳನ್ನು ಪರಿಶೀಲಿಸಲು ಸದರಿ ಕಾಯ್ದೆಯ ಕಲಂ–16(1) ನೇ ಪ್ರಕಾರ ಕರ್ನಾಟಕ ಕಂದಾಯ ಮೇಲ್ಮನವಿ ನ್ಯಾಯ ಮಂಡಲಿಗೆ ಅಧಿಕಾರವಿರುತ್ತದೆ.

ಮೇಲ್ಕಂಡ ಅಧಿನಿಯಮ 15ನೇ ಪ್ರಕರಣದ ಪ್ರಕಾರ ಭಾದಿತವಾದ ಯಾವುದೇ ವ್ಯಕ್ತಿಯು ಸದರಿ ಅಧಿನಿಯಮದ ಪ್ರಕರಣ 16(2)ನೇ ಪ್ರಕಾರ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗೆ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದು.

ಗಡಿ ವಿವರಣೆ

ಉತ್ತರ :– ಸರ್ವೆ ರೇಖೆಯು ಬಾಚಳ್ಳಿ ಗ್ರಾಮ ಸರ್ವೆ ನಂ.286 ರ ಒಂದು ಕಟ್ಟೆ (ಮೂಲೆ ಗೌಡನಕಟ್ಟೆ) ಯ ಉತ್ತರಾದಿ ಮೂಲೆಯಿಂದ ಈಶಾನ್ಯಾಭಿಮುಖವಾಗಿ ಹಾಗೂ ಪೂರ್ವಾಭಿಮುಖವಾಗಿ ಸರ್ವೆ ನಂ.242ರ ವಾಯುವ್ಯ ಗಡಿ ರೇಖೆ, ನಂತರ ಸರ್ವೆ ನಂಬರ್ 242 ರಲ್ಲಿ ಪೂರ್ವಾಭಿಮುಖವಾಗಿ ಹೊರಟು ಸರ್ವೆ ಸ್ಥಳ 1 ರಿಂದ ಸರ್ವೆ ಸ್ಥಳ 20 ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ತಲುಪುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮಿ.ಸರಪಳಿಗಳಲ್ಲಿ)
1–8		47
8–20	76°	75.50

ಪೂರ್ವ:–ಸರ್ವೆ ರೇಖೆಯು ದಕ್ಷಿಣಾಭಿಮುಖವಾಗಿ ಸರ್ವೆ ಸ್ಥಳ 20 ರಿಂದ ಹೊರಟು ಸರ್ವೆ ಸ್ಥಳ 21 ಹಾಗೂ A ಯನ್ನು (ಹೆಗ್ಗವಾಡಿ ಸ್ಟೇಟ್ ಫಾರೆಸ್ಟ್‌ನ ಒಂದನೇ ಬ್ಲಾಕಿನ ಉತ್ತರ ಗಡಿ) ಲೈನನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ತಲುಪುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮಿ.ಸರಪಳಿಗಳಲ್ಲಿ)
20– A	164°	13.00

ದಕ್ಷಿಣಕ್ಕೆ:– ಸರ್ವೆ ರೇಖೆಯು ಹೆಗ್ಗವಾಡಿ ಸ್ಟೇಟ್ ಫಾರೆಸ್ಟ್ ಒಂದನೇ ಬ್ಲಾಕಿನ ಉತ್ತರ ಗಡಿ ಲೈನು A ಸ್ಥಳದಿಂದ ಹೊರಟು ಸದರಿ ಗ್ರಾಮದ ಸರ್ವೆ ನಂಬರ 242ರ ಮೂಲಕ ನೈರುತ್ಯ ಹಾಗೂ ದಕ್ಷಿಣಾಭಿಮುಖವಾಗಿ ಸರ್ವೆ ನಂಬರ್ 284 ರ ಹೆಗ್ಗವಾಡಿ ಸ್ಟೇಟ್ ಫಾರೆಸ್ಟ್ ಒಂದನೆ ಬ್ಲಾಕಿನ ಉತ್ತರ ಗಡಿ ಲೈನಿನಲ್ಲಿ ಬಂದು ಹೆಗ್ಗವಾಡಿ ಸ್ಟೇಟ್ ಫಾರೆಸ್ಟ್‌ನ ವಾಯುವ್ಯ ಮೂಲೆ ಸರ್ವೆ ಸ್ಥಳ 'H' ನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ತಲುಪುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮಿ.ಸರಪಳಿಗಳಲ್ಲಿ)
A-B	229°	43.00
B-C	232°	27.00
C-D	198°	30.00
D-E	191°	26.00
E-F	220°	8.00
F-G	244°	4.00
G-H	122°	6.00

ಪಶ್ಚಿಮಕ್ಕೆ:– ಸರ್ವೆ ರೇಖೆಯು ಸರ್ವೆ ಸ್ಥಳ H ನಿಂದ ವಾಯುವ್ಯ, ಪೂರ್ವ, ಉತ್ತರ, ಈಶಾನ್ಯ ಹಾಗೂ ಪಶ್ಚಿಮಾಭಿಮುಖವಾಗಿ ಹೊರಟು ಪ್ರಾರಂಭಿಕ ಸರ್ವೆ ಸ್ಥಳ 1 ನ್ನು ಈ ಕೆಳಕಂಡ ಕೋನ ಡಿಗ್ರಿ ಮತ್ತು ದೂರಗಳಲ್ಲಿ ತಲುಪುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮಿ.ಸರಪಳಿಗಳಲ್ಲಿ)
H –31	337°	59.50
31–32	104°	4.50
32–34	16°	10.50
34–36	42°	14.00
36–37	84°	5.00
37–38	360°	3.00
38–1	270°	28.00

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ , ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆ.

ಪಿ.ಆರ್. 91